ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालय:

पम्पमहाकविमार्गः, चामराजपेटे, बेङ्गलूरु - ५६००१८.

ಕಸಂವಿ/ಪ್ರಸಾರಾಂಗ/ಜಾ.ಸಂ.ಪ/ಕಡತ-02/2025-26 ದಿನಾಂಕ: 13.02.2026

## ಸೂಚನಾ ಪತ್ರ

**ವಿಷಯ:** ಕರ್ನಾಟಕ ಸಂಸ್ಕೃತ ಅಧ್ಯಯನಮ್ ಷಾಣ್ಮಾಸಿಕ ಶೋಧ ಪತ್ರಿಕೆ (ಜರ್ನಲ್) ಜುಲೈ-ಡಿಸೆಂಬರ್-2025 ರ ಡಿ.ಟಿ.ಪಿ., ಒಳಪುಟವಿನ್ಯಾಸ ಮತ್ತು ಮುಖಪುಟ ವಿನ್ಯಾಸ ಹಾಗೂ ಮುದ್ರಿಸಿ ಸರಬರಾಜು ಮಾಡುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಒಪ್ಪಿಗೆ ಕಂಡಿಕೆ ಸಂಖ್ಯೆ:15, ದಿನಾಂಕ:12.02.2026

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕರ್ನಾಟಕ ಸಂಸ್ಕೃತ ಅಧ್ಯಯನಮ್ ಷಾಣ್ಮಾಸಿಕ ಶೋಧ ಪತ್ರಿಕೆ (ಜರ್ನಲ್ ಜುಲೈ-ಡಿಸೆಂಬರ್-2025ರ)ಯನ್ನು ಡಿ.ಟಿ.ಪಿ., ಒಳಪುಟವಿನ್ಯಾಸ ಮತ್ತು ಮುಖಪುಟ ವಿನ್ಯಾಸ ಹಾಗೂ ಮುದ್ರಿಸಿ ಸರಬರಾಜು ಮಾಡುವ ವಿವಿಧ ಸಂಸ್ಥೆಗಳಿಂದ ಮೊಹರು ಮಾಡಿದ ದರಪಟ್ಟಿಗಳನ್ನು ಆಹ್ವಾನಿಸಲಾಗಿದ್ದು, ದರಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸೂಚನಾ ಪತ್ರವನ್ನು ಹೊರಡಿಸಿದ ದಿನಾಂಕದಿಂದ 07 ದಿನಗಳ ಒಳಗಾಗಿ **"ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು-560018"** ಈ ವಿಳಾಸಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ. ಕರ್ನಾಟಕ ಸಂಸ್ಕೃತ ಅಧ್ಯಯನಮ್ ಷಾಣ್ಮಾಸಿಕ ಶೋಧ ಪತ್ರಿಕೆ (ಜರ್ನಲ್ ಜುಲೈ-ಡಿಸೆಂಬರ್-2025ರ)ಯನ್ನು ಮುದ್ರಿಸಿ ಸರಬರಾಜು ಮಾಡಬೇಕಾಗಿರುವ ವಿವರಗಳು ಈ ಕೆಳಕಂಡತಿವೆ.

1. ಪುಸ್ತಕದ ಅಳತೆ:1/4 ರಾಯಲ್ ಸೈಜ್
2. ಪ್ರತಿಗಳ ಸಂಖ್ಯೆ:200 (ಎರಡುನೂರು)
3. ಪುಟಗಳ ಸಂಖ್ಯೆ:180-200 ಪುಟಗಳು. (ಅಂದಾಜು).
4. ಪುಸ್ತಕದ ಅಳತೆ-1/4 (ಒಳಪುಟ) ರಾಯಲ್ ಸೈಜ್ ಪುಸ್ತಕವನ್ನು ಪುಟವಿನ್ಯಾಸ ಮತ್ತು ಹೊಂದಾಣಿಕೆ ಜೊತೆಗೆ ಡಿ.ಟಿ.ಪಿ. ಮಾಡಲು (ಸಂಸ್ಕೃತ, ಕನ್ನಡ, ಆಂಗ್ಲ) ಭಾಷೆಯಲ್ಲಿ ದರಪಟ್ಟಿಯಲ್ಲಿ ಸೂಚಿಸಿರುವಂತೆ ದರವನ್ನು ನೀಡಲಾಗುವುದು.
5. ಒಳಪುಟಕ್ಕೆ ಎನ್ ಎಸ್ ಮ್ಯಾಪ್ಲಿಥೋ,70 ಜಿ.ಎಸ್.ಎಮ್ ಲೈಟ್ ವೈಟ್ ಕಾಗದವನ್ನು ಉಪಯೋಗಿಸಬೇಕು ಮತ್ತು ಒಳಪುಟಗಳು ಏಕವರ್ಣದಿಂದ ಕೂಡಿರಬೇಕು.
6. ಮುಖಪುಟಕ್ಕೆ 300 (ಮುಖಪುಟ ಅಳತೆ -16/24) ಜಿ.ಎಸ್.ಎಮ್ ಗುಣಮಟ್ಟದ ಆರ್ಟ್ ಬೋರ್ಡ್ ಕಾಗದವನ್ನು ಬಳಸಬೇಕು. ಪರ್ಫೆಕ್ಟ್ ಬೈಂಡಿಂಗ್ ಗ್ಲಾಸ್ ಲ್ಯಾಮಿನೇಷನ್ ಮಾಡಬೇಕು. ಮುಖಪುಟವರ್ಣವು ಬಹುವರ್ಣದಿಂದ ಕೂಡಿರಬೇಕು
7. ಮುದ್ರಣವು ತುಲನಾತ್ಮಕ ದರಪಟ್ಟಿಯಲ್ಲಿ ಸೂಚಿಸಿದಂತೆ ಪಾಲಿಸುವುದು.
8. ಎಲ್ಲಾ ಪುಸ್ತಕಗಳನ್ನು ಸೆಕ್ಷನ್ ಸ್ಟಿಚ್ ಬೈಂಡಿಂಗ್ ಹಾಗೂ ಮ್ಯಾಟ್ ಫಿನಿಷಿಂಗ್ ಮಾಡಬೇಕು.
9. ಮುದ್ರಣಕ್ಕಾಗಿ ಉಪಯೋಗಿಸಿದ ಸಾಫ್ಟ್ ಕಾಪಿಯನ್ನು ಪ್ರಸಾರಾಂಗ(ಕ.ಸಂ.ವಿ)ಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕು.
10. ಪುಸ್ತಕದ ಮುದ್ರಿತ ಒಂದು ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಒಪ್ಪಿಗೆ ಪಡೆದ ನಂತರ ಮುದ್ರಣ ಕಾರ್ಯವನ್ನು ಮುಂದುವರಿಸಬೇಕು.
11. ಮುದ್ರಣಾದೇಶ ನೀಡಿದ 15 ದಿನಗಳೊಳಗಾಗಿ ಪುಸ್ತಕಗಳನ್ನು ವಿಶ್ವವಿದ್ಯಾಲಯಕ್ಕೆ ಸರಬರಾಜು ಮಾಡಬೇಕು.
12. ಮುದ್ರಿತ ಪುಸ್ತಕಗಳನ್ನು ಉತ್ತಮವಾಗಿ ಪ್ಯಾಕ್ ಮಾಡಿ ತಮ್ಮ ಸ್ವಂತ ವೆಚ್ಚದಲ್ಲಿ ವಿಶ್ವವಿದ್ಯಾಲಯದ ಕಛೇರಿಗೆ ಸರಬರಾಜು ಮಾಡಬೇಕು.ಸಾಗಣೆಕೆಯ ಸಂದರ್ಭದಲ್ಲಿ ಉಂಟಾಗುವ ಡ್ಯಾಮೇಜುಗಳಿಗೆ ತಾವೇ ಜವಾಬ್ದಾರರು.
ದರಪಟ್ಟಿಯಲ್ಲಿ ಸೂಚಿಸುವಂತೆ ಪುಟಕ್ಕಿಂತ ಹೆಚ್ಚು ಪ್ರತಿಗಳು ಹಾಗೂ ಹೆಚ್ಚು ಪುಟಗಳು ಹೆಚ್ಚು ಹಾಳೆಗೆ ಲೆಕ್ಕ ಹಾಕಿ ವಿಶ್ವವಿದ್ಯಾಲಯವು ಭರಿಸುತ್ತದೆ.

ಕುಲಸಚಿವರು(ಪ್ರ)
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

ಪ್ರತಿಗಳು:-

1. ಮಾನ್ಯ ಕುಲಪತಿಗಳ ಆಪ್ತಶಾಖೆ
2. ಮಾನ್ಯ ಕುಲಸಚಿವರ ಆಪ್ತಶಾಖೆ
3. ಮಾನ್ಯ ಹಣಕಾಸು ಅಧಿಕಾರಿಗಳ ಆಪ್ತಶಾಖೆ
4. ಕಛೇರಿ ಪ್ರತಿ.